ಇ) ಈ ಬಗ್ಗೆ ತಜ್ಞರ ಅಭಿಪ್ರಾಯ ಪಡೆಯಲಾಗಿದೆಯೇ ಹಾಗೂ ಈ ರೀತಿ ಸಾರ್ವತ್ರಿಕ ಪರೀಕ್ಷೆಯನ್ನು ನಡೆಸುವುದರಿಂದ ಉಂಟಾಗುವ ಸುಧಾರಣೆ ಏನು ?

ಈ) ಸದರಿ ಪರೀಕ್ಷೆಯನ್ನು ನಡೆಸುವುದರಿಂದ ಸರ್ಕಾರದ ಬೊಕ್ಕಸಕ್ಕೆ ತಗಲುವ ಖರ್ಚೆಷ್ಟು ?

ಉ) ಸದರೀ ಪರೀಕ್ಷೆಯನ್ನು ಯಾವ ವರ್ಷದಿಂದ ನಡೆಸಲಾಗುವುದು ?

ಶ್ರೀ ಎಂ. ರಘುಪತಿ (ಶಿಕ್ಷಣ ರಾಜ್ಯ ಮಂತ್ರಿಗಳು).—

ಅ) ಈ ಸಂಬಂಧದಲ್ಲಿ ಡಾ. ಹೆಚ್. ನರಸಿಂಹಯ್ಯನವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿದ್ದು, ಸಮಿತಿಯ ವರದಿಯು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಸುಮಾರು ೪,೮೯,೫೧೬ ವಿದ್ಯಾರ್ಥಿಗಳು,

ಇ) ತಜ್ಞರ ಸಮಿತಿಯ ವರದಿಯು ಸರ್ಕಾರದ ಪರಿಶೀಲನೆಯಲ್ಲಿದ್ದು ಅತಿ ಶೀಘ್ರವೇ ನಿರ್ಧಾರ ತೆಗೆದುಕೊಳ್ಳಲಾಗುವುದು.

ಈ) ಸುಮಾರು ೩೮.೫೭ ಲಕ್ಷ ರೂ.ಗಳು.

ಉ) ಸರ್ಕಾರವು ಪರಿಶೀಲಿಸುತ್ತಿದೆ.

ರಾಜ್ಯದಲ್ಲಿರುವ ತಾಂತ್ರಿಕ ಶಾಲೆಗಳ ಬಗ್ಗೆ

೨೦೨೨. ಶ್ರೀ ಐ. ಬಿ. ಶಂಕರ್ (ಚಿಕ್ಕಮಗಳೂರು).— ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ತಾಂತ್ರಿಕ ಶಾಲೆಗಳು ಎಷ್ಟಿವೆ ? (ಪಾಲಿಟೆಕ್ನಿಕ್)

ಆ) ಇವುಗಳಲ್ಲಿ ಸರ್ಕಾರದ ತಾಂತ್ರಿಕ ಶಾಲೆಗಳೆಷ್ಟು ಮತ್ತು ಖಾಸಗಿ ತಾಂತ್ರಿಕ ಶಾಲೆಗಳೆಷ್ಟು ?

ಇ) ಗ್ರಾಮಾಂತರ ಪ್ರದೇಶಗಳಲ್ಲಿ ಎಷ್ಟಿವೆ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಎಷ್ಟಿವೆ ?

ಈ) ಈಗ ಹೊಸದಾಗಿ ತಾಂತ್ರಿಕ ಶಾಲೆಗಳನ್ನು ತೆರೆಯುವುದಕ್ಕೆ ಹಾಕಿರತಕ್ಕಂತ ನಿಬಂಧನೆಗಳೇನು ಹಾಗೂ ಇಂತಹ ನಿಬಂಧನೆಗಳಿಂದ ಶಾಲೆಗಳನ್ನು ತೆರೆಯುವುದು ಸಾಧ್ಯವೇ ?

ಉ) ಇಂತಹ ನಿಬಂಧನೆಗಳು ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಶಾಲೆಗಳಿಗೆ ಇವೆಯೇ, ಇಲ್ಲದಿದ್ದರೆ ಏತಕ್ಕೆ ಈ ನಿಬಂಧನೆಗಳನ್ನು ಈ ಶಾಲೆಗಳಿಗೆ ಹಾಕಿಲ್ಲ ?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

ಅ) ೧೨೨

ಆ) ೧. ಸರ್ಕಾರದ್ದು — ೩೨

೨. ಅನುದಾನ ಪಡೆಯುತ್ತಿರುವುದು— ೮

೩. ಖಾಸಗಿ — ೮೨

ಒಟ್ಟು ೧೨೨

ಇ) ೧. ಗ್ರಾಮಾಂತರ ಪ್ರದೇಶಗಳಲ್ಲಿ (ತಾಲ್ಲೂಕುಗಳು ಸೇರಿದಂತೆ) — ೭೧

೨. ಪಟ್ಟಣ ಪ್ರದೇಶಗಳಲ್ಲಿ (ಜಿಲ್ಲೆಗಳು ಸೇರಿದಂತೆ) — ೫೧

ಈ) ನಿಬಂಧನೆಗಳನ್ನು ಅನುಬಂಧ 'ಅ'ದಲ್ಲಿ ಕೊಟ್ಟಿದೆ.
ಈಗಿರುವ ನಿಬಂಧನೆಗಳಿಂದ ತಾಂತ್ರಿಕ ಶಾಲೆಗಳನ್ನು ತೆರೆಯುವುದು ಸಾಧ್ಯ.

ಉ) ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಕಾಲೇಜುಗಳನ್ನು ತೆರೆಯಲು ಇರುವ ನಿಬಂಧನೆಗಳನ್ನು ಅನುಬಂಧ 'ಆ'ನಲ್ಲಿ ಕೊಟ್ಟಿದೆ.

ತಾಂತ್ರಿಕ ಶಾಲೆಗಳನ್ನು ತೆರೆಯಲು ಬಹಳ ಜನ ಖಾಸಗಿ ವಿದ್ಯಾ ಸಂಸ್ಥೆಗಳವರು ಮುಂದೆ ಬರುತ್ತಿರುವುದರಿಂದ ಶಾಲೆಗಳನ್ನು ನಿಜವಾಗಿ ನಡೆಸಲು ಆಸಕ್ತಿ ಇರುವವರು, ಆರ್ಥಿಕವಾಗಿ ಸುಭದ್ರವಾಗಿರುವವರು ಮತ್ತು ತಾಂತ್ರಿಕ ಶಾಲೆಗಳ ಗುಣಮಟ್ಟವನ್ನು ಕಾಯ್ದಿರಿಸಲು ಹಾಗೂ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಭದ್ರತಾ ನಿಧಿಯನ್ನು ಕಟ್ಟಬೇಕೆಂಬ ನಿಬಂಧನೆಯನ್ನು ತಾಂತ್ರಿಕ ಶಾಲೆಗಳ ವಿಷಯದಲ್ಲಿ ಹಾಕಿರುವುದು ಸಮಂಜಸವಾಗಿದೆ. ಸದ್ಯದಲ್ಲಿ ಖಾಸಗಿ ವಿದ್ಯಾ ಸಂಸ್ಥೆಗಳನ್ನು ಬಿಟ್ಟರೆ ಉಳಿದವರೆಲ್ಲರೂ ಸರ್ಕಾರ ಹಾಕಿರುವ ನಿಬಂಧನೆಗಳನ್ನು ಪಾಲಿಸಿದ್ದಾರೆ.

ಅನುಬಂಧ–ಅ

ಈಗ ಹೊಸದಾಗಿ ಖಾಸಗಿ ಪಾಲಿಟೆಕ್ನಿಕ್‌ಗಳನ್ನು ಖಾಸಗಿ ಸಂಸ್ಥೆಯವರು ತೆರೆಯಲು ಮುಂದೆ ಬಂದಲ್ಲಿ ಅಂತಹವರು ನಿಗದಿತ ಅರ್ಜಿ ಫಾರಂನೊಂದಿಗೆ, ಒಂದು ಕೋರ್ಸಿಗೆ ರೂ. ೨೦೦ರಂತೆ ಸರ್ಕಾರಕ್ಕೆ ಜಮಾ ಮಾಡಬೇಕು ಮತ್ತು ಅರ್ಜಿಯೊಂದಿಗೆ ಕೆಲವು ಅರ್ಹತಾ ದಾಖಲು ಪತ್ರಗಳನ್ನು ಲಗತ್ತಿಸಬೇಕು. ನಂತರ ಈ ವಿಷಯದಲ್ಲಿ ಸ್ಥಳ ಪರಿಶೀಲನೆ ಮಾಡಲು ಪರಿಣಿತರ ಸಮಿತಿಯನ್ನು ನೇಮಿಸಲಾಗುವುದು. ಪರಿಣಿತರ ಸಮಿತಿಯ ವರದಿಯನ್ನು ಸರ್ಕಾರ ಒಪ್ಪಿದ ನಂತರ ಸರ್ಕಾರದ ಆದೇಶದಂತೆ ಕೋರ್ಸಿಗೆ ಮೊದಲನೆ ವರ್ಷಕ್ಕೆ ೧ ಲಕ್ಷ, ಎರಡನೇ ವರ್ಷಕ್ಕೆ ೨ ಲಕ್ಷ ಹಾಗೂ ಮೂರನೇ ವರ್ಷಕ್ಕೆ ೩ ಲಕ್ಷದಂತೆ ಭದ್ರತಾ ನಿಧಿ ಅಥವಾ ಷೆಡ್ಯೂಡ್ ಬ್ಯಾಂಕಿನಿಂದ ಪಡೆದ ಬ್ಯಾಂಕ್ ಗ್ಯಾರಂಟಿಯನ್ನು ಕೊಡಬೇಕಾಗುವುದು ಅಲ್ಲದೆ ಈ ಸಂಸ್ಥೆಯಲ್ಲಿ ಪಾಲಿಟೆಕ್ನಿಕ್‌ನ್ನು ನಡೆಸುವ ಸಲುವಾಗಿ ಸಾಕಷ್ಟು ಸಂಪನ್ಮೂಲವಿರಬೇಕು.

ಈ ಮೇಲ್ಕಂಡ ನಿಬಂಧನೆಗಳಿಗೆ ಬದ್ಧರಾಗುವಂತಹ ಖಾಸಗಿ ಸಂಸ್ಥೆಗಳು ಪಾಲಿಟೆಕ್ನಿಕ್‌ನ್ನು ತೆರೆಯಬಹುದು.

ಅನುಬಂಧ–ಆ

ಯಾವುದೇ ಖಾಸಗಿ ಸಂಸ್ಥೆಯು ಹೊಸದಾಗಿ ವೈದ್ಯಕೀಯ ಅಥವಾ ಇಂಜಿನಿಯರಿಂಗ್ ಕಾಲೇಜುಗಳನ್ನು ಪ್ರಾರಂಭಿಸಬೇಕಾದರೆ ಸಂಬಂಧಪಟ್ಟ ವಿಶ್ವವಿದ್ಯಾನಿಲಯಕ್ಕೆ ನಿಗದಿಪಡಿಸಿದ ಅವಧಿಯಲ್ಲಿ ಅರ್ಜಿ ಸಲ್ಲಿಸಬೇಕು ವಿಶ್ವವಿದ್ಯಾನಿಲಯವು ನಿಗದಿಪಡಿಸಿದ ಸಂಯೋಜನಾ ಶುಲ್ಕವನ್ನು ಕಟ್ಟಬೇಕು. ಈ ಶುಲ್ಕ ೨೦೦೦ ರೂ. ನಿಂದ ೧೦,೦೦೦ ರೂ.ವರೆಗೆ ಇದೆ. ಒಂದೊಂದು ವಿಶ್ವವಿದ್ಯಾನಿಲಯದಲ್ಲಿ ಬೇರೆ ಬೇರೆ ಮೊತ್ತದ ಶುಲ್ಕ ಇದೆ. ವಿಶ್ವವಿದ್ಯಾನಿಲಯವು ನಿಯಮಿಸಿದ ಸಮಿತಿಯು ಪರಿಶೀಲನೆ ಮಾಡಿ ವಿಶ್ವವಿದ್ಯಾನಿಲಯಕ್ಕೆ ಸೂಕ್ತ ಶಿಫಾರಸ್ಸು ಮಾಡುತ್ತದೆ. ಸಮಿತಿಯ ಶಿಫಾರಸ್ಸನ್ನು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಮತ್ತು ಅಕಾಡೆಮಿಕ್ ಕೌನ್ಸಿಲ್ ಒಪ್ಪಿದ ನಂತರ ಪ್ರಸ್ತಾವನೆ ಸರ್ಕಾರಕ್ಕೆ ಬಂದು, ಸರ್ಕಾರವು ಕೋರಿಕೆಗಳನ್ನು ಪರಿಶೀಲಿಸುತ್ತದೆ, ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಕಾಲೇಜುಗಳ ವಿಷಯದಲ್ಲಿ ತಾಂತ್ರಿಕ ಶಾಲೆಗಳಿಗೆ ನಿಗದಿಪಡಿಸಿದಂತೆ ನಿಧಿ ಕಟ್ಟಬೇಕಾಗಿಲ್ಲ.

ಹೂವಿನ ಸಿಗ್ಲಿಯಲ್ಲಿ ಮೇಲ್ಕಟ್ಟಿದ ಕಂಡಿಯುವ ನೀರಿನ ತೊಟ್ಟಿ ಕಟ್ಟುವ ಬಗ್ಗೆ

೧೪೮೪. ಶ್ರೀ ನೀಲಕಂಠಗೌಡ ವಿ. ಪಾಟೀಲ್ (ಶಿಗ್ಗಾಂವ).— ಮಾನ್ಯ ಗ್ರಾಮೀಣ ಅಭಿವೃದ್ಧಿ ಪಂಚಾಯತ್ ರಾಜ್ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?